**ಕರ್ನಾಟಕ ಸರ್ಕಾರ**

ಸಂಖ್ಯೆ:ಅಇ (ವಿ) 28 ಪಿಇಎನ್ 2009

ಕರ್ನಾಟಕ ಸರ್ಕಾರ ಸಚಿವಾಲಯ,
ಬಹು ಮಹಡಿ ಕಟ್ಟಡ.
ಬೆಂಗಳೂರು, ದಿನಾಂಕ 21–10–2010.

# ಸುತ್ತೋಲೆ

ವಿಷಯ: ನೂತನ ಪಿಂಚಣಿ ಪದ್ಧತಿ (ಎನ್.ಪಿ.ಎಸ್) ಸೇರಿರುವ ಸರ್ಕಾರಿ ನೌಕರರಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಮತ್ತು ನೌಕರರಿಂದ ಪಾವತಿಸಬೇಕಾದ ಬ್ಯಾಕ್‌ಲಾಗನ್ನು ಪಾವತಿಸುವ ಕುರಿತು.

ಉಲ್ಲೇಖ: 1) G.O.No. FD (SPL) 04 PET 2005, ದಿನಾಂಕ: 31.03.2006
2) G.O.No. FD (SPL)28 PEN 2009, ದಿನಾಂಕ: 19.01.2010
3) G.O.No. FD (SPL) 28 PEN 2009, ದಿನಾಂಕ: 29.03.2010

*****

ರಾಜ್ಯ ಸರ್ಕಾರವು ಉಲ್ಲೇಖ (1) ರ ಸರ್ಕಾರಿ ಆದೇಶದಂತೆ ದಿ: 01.04.2006 ರಂದು ಹಾಗೂ ತದನಂತರ ಸರ್ಕಾರಿ ಸೇವೆಗೆ ಸೇರಿದ ಎಲ್ಲಾ ಸರ್ಕಾರಿ ನೌಕರರಿಗೆ ನೂತನ ಪಿಂಚಣಿ ಪದ್ದತಿಯನ್ನು ಕಡ್ಡಾಯಗೊಳಿಸಿ, ಉಲ್ಲೇಖ (2) ಸರ್ಕಾರಿ ಆದೇಶದಂತೆ ನೂತನ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಿದೆ. ಹಾಗೂ ಉಲ್ಲೇಖ (3) ಸರ್ಕಾರದ ಆದೇಶದಲ್ಲಿನ ಸೂಚನೆಗಳಂತೆ ಕಾರ್ಯರೂಪಗೊಳಿಸಿದೆ.

ಈಗಾಗಲೇ ನೂತನ ಪಿಂಚಣಿ ಯೋಜನೆಗೆ ಸೇರಿರುವ ಸರ್ಕಾರಿ ನೌಕರರಿಗೆ ಎನ್.ಪಿ.ಎಸ್ ಅಳವಡಿಸಿದ್ದು ಎನ್.ಪಿ.ಎಸ್ ಸಾಮಾನ್ಯ (ರೆಗ್ಯುಲರ್) ಕಟಾವಣೆ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಹಾಗೂ ದಿ: 01.04.2006 ರಂದು ಅಥವಾ ಅನಂತರ ಸರ್ಕಾರಿ ಸೇವೆಗೆ ಸೇರಿರುವ ಎನ್.ಪಿ.ಎಸ್ ನೌಕರರಿಗೆ ಆಯಾ ತಿಂಗಳಿನಿಂದ ಆರಂಭವಾಗಿ ಪ್ರಸಕ್ತ ವಂತಿಗೆಗಳು ಪ್ರಾರಂಭವಾಗುವವರೆಗೆ ಬ್ಯಾಕ್‌ಲಾಗ್ ಆಗುತ್ತದೆ. ನೌಕರರ ಹಾಗೂ ಸರ್ಕಾರದ ವಂತಿಗೆಗಳಿಗೆ ಎರಡಕ್ಕೂ ಈ ಬ್ಯಾಕ್‌ಲಾಗ್ ಇರುತ್ತದೆ.

ಎಲ್ಲಾ ಎನ್.ಪಿ.ಎಸ್ ನೌಕರರ ಸಂಬಂಧ ಸರ್ಕಾರದ ಬ್ಯಾಕ್‌ಲಾಗ್ ವಂತಿಗೆಯನ್ನು ಶೇ 8% ಚಕ್ರ ಬಡ್ಡಿ ಸಹಿತ ಒಂದೇ ಇಡುಗಂಟಿನಲ್ಲಿ ಪಾವತಿಸಲು ನಿರ್ಧರಿಸಿದೆ. ಹಾಗೂ ಬಡ್ಡಿಯನ್ನು ಪ್ರತಿಯೊಂದು ಬ್ಯಾಕ್‌ಲಾಗ್ ಮಾಸಿಕ ವಂತಿಗೆಗೆ, ಬ್ಯಾಕ್‌ಲಾಗ್ ಬಾಕಿಯಿರುವ ತಿಂಗಳಿನಿಂದ ಪ್ರಸಕ್ತ ಕಟಾವಣೆ ಪ್ರಾರಂಭವಾದ ತಿಂಗಳಿನ ಹಿಂದಿನ ತಿಂಗಳವರೆಗಿನ ಅವಧಿಗೆ ಪಾವತಿಸಲಾಗುವುದು. ಇದಕ್ಕೆ ಸಂಬಂಧಿಸಿದಂತೆ ಪ್ರತಿಯೊಬ್ಬ ಎನ್.ಪಿ.ಎಸ್ ನೌಕರರ ದಿ: 01.04.2006 ರಿಂದ ಅಥವಾ ಕೆಲಸಕ್ಕೆ ಸೇರಿದ ದಿನಾಂಕದಿಂದ ರೆಗ್ಯುಲರ್ ಕಟಾವಣೆ ಆರಂಭದವರೆಗಿನ ಬ್ಯಾಕ್‌ಲಾಗ್ ಲೆಕ್ಕಾಚಾರ ವಿವರಗಳು HRMS ನಲ್ಲಿ ಲಭ್ಯವಿರುತ್ತದೆ.

ಹಣ ಸೆಳೆಯುವ ಹಾಗೂ ಬಟವಾಡೆ ಅಧಿಕಾರಿಗಳು ಈ ಲೆಕ್ಕಾಚಾರವನ್ನು ಪರಿಶೀಲಿಸಿ ಎನ್.ಪಿ.ಎಸ್ ಸರ್ಕಾರಿ ಬ್ಯಾಕ್‌ಲಾಗ್‌ಗಳನ್ನು ನೌಕರರು ಸೇವೆಗೆ ಸೇರಿದ ದಿನದಿಂದ (ದಿ:01.04.2006 ಹಾಗೂ ತದನಂತರ) ಲೆಕ್ಕಾಚಾರ ಮಾಡಿ, ನೌಕರರ ವೇತನಕ್ಕೆ ಸಂಬಂಧಿಸಿದ Increment, Promotion, Suspension,

ಇತ್ಯಾದಿಗಳ ನಿಟ್ಟಿನಲ್ಲಿ ಮರುಪರಿಶೀಲಿಸಿ, ಲೆಕ್ಕಾಚಾರ ಮಾಡಿ, HRMS ನಲ್ಲಿ ಒಪ್ಪಿಸುವುದು. (Submit ಮಾಡುವುದು). ಷೆಡ್ಯೂಲ್–4 ಮತ್ತು ಷೆಡ್ಯೂಲ್–5 ಗಳನ್ನು ಹೆಚ್.ಆರ್.ಎಮ್.ಎಸ್ ನಲ್ಲಿ ಜನರೇಟ್

ಮಾಡಿಕೊಳ್ಳುವುದು ಹಾಗೂ ಎರಡು ಪ್ರತಿಗಳನ್ನು ಮುದ್ರಿಸಿಕೊಂಡು, ಷೆಡ್ಯೂಲ್–4 ರ ಒಂದು ಪ್ರತಿಯನ್ನು ಸಹಿ ಮಾಡಿ ನೌಕರರ ಸೇವಾ ಪುಸ್ತಕದಲ್ಲಿ ಲಗತ್ತಿಸುವುದು. ಹಾಗೂ ಮತ್ತೊಂದು ಪ್ರತಿಯನ್ನು ಸಹಿಮಾಡಿ ಷೆಡ್ಯೂಲ್–5 ರೊಂದಿಗೆ **ಉಪನಿರ್ದೇಶಕರು, ನೂತನ ಪಿಂಚಣಿ ಯೋಜನೆ ಘಟಕ, ಖಜಾನೆ ನಿರ್ದೇಶನಾಲಯ, ವಿಶ್ವೇಶ್ವರಯ್ಯ ಕೇಂದ್ರ ಚಿಕ್ಕ ಗೋಪುರ, ಬೆಂಗಳೂರು–01.** ಈ ವಿಳಾಸಕ್ಕೆ ಸಲ್ಲಿಸುವುದು. ಮತ್ತೊಂದು ಷೆಡ್ಯೂಲ್–5 ಪ್ರತಿಯನ್ನು ಕಡತದಲ್ಲಿ ದಾಖಲೆಗೆ ಲಗತ್ತಿಸುವುದು. ಈ ಪ್ರಕ್ರಿಯೆಯನ್ನು ನವೆಂಬರ್ 30, 2010 ರೊಳಗೆ ಪೂರ್ಣಗೊಳಿಸಲು ಸೂಚಿಸಲಾಗಿದೆ.

ಉಪ ನಿರ್ದೇಶಕರು, ನೂತನ ಪಿಂಚಣಿ ಯೋಜನೆ ಘಟಕ ಇವರು ಸದರಿ ಹಣ ಸೆಳೆಯುವ ಹಾಗೂ ಬಟವಾಡೆ ಅಧಿಕಾರಿಗಳು ಸಲ್ಲಿಸುವ ಪ್ರತಿ ಎನ್.ಪಿ.ಎಸ್ ನೌಕರರ ಸರ್ಕಾರಿ ಬ್ಯಾಕ್ ಲಾಗ್ ವಿವರಣಾ ಪಟ್ಟಿಯ ಪ್ರಕಾರ ಪ್ರತಿ ನೌಕರರಿಗೆ ಅನ್ವಯಿಸುವ ಸರ್ಕಾರದ ಬ್ಯಾಕ್‌ಲಾಗ್ ವಿವರಗಳನ್ನು CRA ಗೆ ಅಪ್‌ಲೋಡ್ ಮಾಡಿ ನಂತರ ಬ್ಯಾಕ್ ಲಾಗ್ ಮೊತ್ತವನ್ನು ಬ್ಯಾಂಕ್ ಆಫ್ ಇಂಡಿಯಾ ಮೂಲಕ ನೌಕರರ ಖಾಯಂ ನಿವೃತ್ತಿ ಖಾತೆಗೆ (PRAN) ಜಮಾ ಮಾಡುವರು.

ಹಣ ಸೆಳೆಯುವ ಹಾಗೂ ಬಟವಾಡೆ ಅಧಿಕಾರಿಗಳು ಹೆಚ್.ಆರ್.ಎಮ್.ಎಸ್. ನಲ್ಲಿ ಲಭ್ಯವಿರುವ ಲೆಕ್ಕಾಚಾರವನ್ನು ಪರಿಶೀಲಿಸಿ ದೃಢೀಕರಿಸಿದ ಕೂಡಲೇ ನೌಕರರ ಬ್ಯಾಕ್‌ಲಾಗ್ ಅನ್ನು ಕಟಾವಣೆ ಮಾಡಲು ಹೆಚ್.ಆರ್.ಎಮ್.ಎಸ್. ಸಿದ್ಧವಾಗಿರುತ್ತದೆ.ಹಾಗೂ ಡಿಡಿಓ ಗಳು ಸಾಮಾನ್ಯ ವಂತಿಗೆ ಜೊತೆ ನೌಕರರ ಬ್ಯಾಕ್‌ಲಾಗ್ ವಂತಿಗೆ ಕಟಾವಣೆ ಮಾಡತಕ್ಕದ್ದು. ಇದಕ್ಕೂ ಮುಂಚೆ ನೌಕರರಿಂದ ಬ್ಯಾಕ್‌ಲಾಗ್ ವಂತಿಗೆ ಕಟಾವಣೆ ಯಾವ ರೀತಿ ಮಾಡಬೇಕು ಎಂಬುದರ ಕುರಿತು ಅಭಿಮತವನ್ನು ಬ್ಯಾಕ್‌ಲಾಗ್ ಅಭಿಮತ ನಮೂನೆ (Backlog option form) ಮೂಲಕ ಪಡೆದುಕೊಳ್ಳುವುದು. ಇದರ ಒಂದು ಪ್ರತಿಯನ್ನು ನೌಕರರ ವೈಯಕ್ತಿಕ ವಹಿಯಲ್ಲಿ ಕಡತಗೊಳಿಸುವುದು. ನೂತನ ಪಿಂಚಣಿ ಯೋಜನೆಯಲ್ಲಿ ಡಿಡಿಓ ಗಳು ನಿರ್ವಹಿಸಬೇಕಾದ ಕೈಪಿಡಿಯು (User Mannual) ಹೆಚ್.ಆರ್.ಎಮ್.ಎಸ್. ಮತ್ತು ಖಜಾನೆ ತಂತ್ರಾಂಶದಲ್ಲಿ ಲಭ್ಯವಿರುತ್ತದೆ.

(ರಣದೀಪ್.ಡಿ)
ಉಪ ಕಾರ್ಯದರ್ಶಿಗಳು–3,
ಆರ್ಥಿಕ ಇಲಾಖೆ.

ಪ್ರತಿಗಳು:

1. ಸರ್ಕಾರದ ಮುಖ್ಯ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿಗಳು
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗಳು.
3. ಇಲಾಖಾ ಮುಖ್ಯಾಧಿಕಾರಿಗಳು.
4. ಜಿಲ್ಲೆಗಳ ಜಿಲ್ಲಾಧಿಕಾರಿಗಳು

5. ಪ್ರಾದೇಶಿಕ ಆಯುಕ್ತರು, ಬೆಂಗಳೂರು/ಮೈಸೂರು/ಬೆಳಗಾವಿ/ಗುಲ್ಬರ್ಗಾ
6. ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು.
7. ಪ್ರಧಾನ ಮಹಾಲೇಖಪಾಲರು (ಸಿವಿಲ್ ಮತ್ತು ವಾಣಿಜ್ಯಲೆಕ್ಕಪರಿಶೋಧನೆ),ಕರ್ನಾಟಕ,ಬೆಂಗಳೂರು.
8. ಮಹಾಲೇಖಪಾಲರು (ಕಂದಾಯ ಸ್ವೀಕೃತಿ ಮತ್ತು ಕಾಮಗಾರಿಗಳು ಮತ್ತು ಅರಣ್ಯ ಲೆಕ್ಕಪರಿಶೋಧನೆ),ಕರ್ನಾಟಕ, ಬೆಂಗಳೂರು.
9. ಮಹಾಲೇಖಪಾಲರು (ಲೆಕ್ಕಗಳು ಮತ್ತು ಹಕ್ಕುಗಳು), ಕರ್ನಾಟಕ, ಬೆಂಗಳೂರು.
10. ರಿಜಿಸ್ಟ್ರಾರ್, ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು.
11. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
12. ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬೆಂಗಳೂರು
13. ಕಾರ್ಯದರ್ಶಿ, ರಾಜ್ಯ ವಿಧಾನ ಸಭೆ/ವಿಧಾನಪರಿಷತ್ತು, ಬೆಂಗಳೂರು
14. ಕಾರ್ಯದರ್ಶಿಗಳು, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು.
15. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಬೆಂಗಳೂರು.
16. ರಾಜ್ಯದ ಎಲ್ಲಾ ಜಿಲ್ಲಾ ಖಜಾನೆ ಅಧಿಕಾರಿಗಳು.
17. ಪ್ರಾಜೆಕ್ಟ್ ಆಫೀಸರ್, ಹೆಚ್.ಆರ್.ಎಮ್.ಎಸ್., ಕೊಠಡಿ ಸಂ.145 'A' ಬಹುಮಹಡಿಗಳ ಕಟ್ಟಡ, ಬೆಂಗಳೂರು.

(ಕ್ರ.ಸಂ.7, 8, 9, 10, 11, ಮತ್ತು 14 ರಲ್ಲಿ ನಮೂದಿತವಾದ ಅಧಿಕಾರಿಗಳಿಗೆ ಪತ್ರದ ಮೂಲಕ)